ನಗರ ಡಿವಿಜ್ಯ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 96.

ಮೃತಪಟ್ಟ ಹನುಮಂತರಾವ್ ನಾಯಡುನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಗೋವಿಂದರಾಜಲು ಮೈನರ್, ಗಾರ್ಡಿಯ್ ಮತ್ತು ತಾಯಿ ಭೂಗೀರತಮ್ಮ, ಮೃತಪಟ್ಟಸದರೀ ಹನುಮಂತರಾವ್ ನಾಯಡಿಗೆ ಮಗನು ಆಗಬೇಕೆಂಬ ಹಕ್ಕು ದಾವೀಮೇಲೆ ಮದರಾಸ್ ಇಲಾಕೆಗೆ ಕೀರಿದ ನೆಲ್ಲೂರ ಸ್ಥಳದ ಮೈನರ್ ಗಾರ್ಡಿಯ್ ಭೂಗಿರತಮ್ಮನು ಈಡೂರ್ಪ ಡಿಸ್ಟ್ರಿಕ್ಟ್ ಕಡೂರು ಕಸಬಾ ವಾಸಸ್ಥರಾಗಿ ಮೃತಪಟ್ಟ ಹನುಮಂತರಾವ್ ನಾಯಡಿನ ಜಿಂದಗಿ ಬ್ಯಾಗಿ ಬರತಕ್ಕ (5000) ರೂಪಾಯಿ ಸಾಲಗಳನ್ನು ಮೈನರ್ ಗೋವಿಂದರಾಜಲಿಗೋಸ್ಕರ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರರುದ ಮೈನರ್ ಗಾರ್ಡಿಯ್ ಭೂಗೀರತಮ್ಮನ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತರಾವ್ ನಾಯಡಿನ ಆಸ್ತಿಗೆ ಹಕ್ಕುದಾರರಾದ ವಿಕಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ನವಂಬರ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕೊಡಗು ಫಾರೆಸ್ಟ್ ಇಲಾಖಾ.

ಸ್ಯ 1889ನೇ ಇಸವಿ ನವಂಬರ್ ತಾರೀಖು 4ರಲ್ಲು.

ಸ್ಯ 1889ನೇ ಇಸವಿ ಡಿಸಂಬರು ತಾರೀಖು 13ನೇ ದಿನ ಹುಣಸೂರು ಡಿವೋದಲ್ಲಿ ಇದರಡಿಕಂಡ ನಾಟಾ ವಗ್ಯೆರೆ ಸಾಮಾನುಗಳು ಹರಾಜು ಹಾಕಲ್ಪಡುತ್ತವೆ.

ತ್ಯಾಗದ ತೊಲೆ ..	480	12400	ಸಲೆ ಅಡಿ
ಹೊನ್ನೆ ವಗ್ಯೆರೆ ..	350	8800	ಡಿಟೋ
ಕುಯಿದ ಬಾಬತು ತ್ಯಾಗದ ಮರದಸಾಮಾನುಗಳು		9650	ಡಿಟೋ
ಆರೇಕಾಲು ವಟ್ಟೆಮರ ..		19000	ಸಂಖೆ.

ಷರತ್.—ಹರಾಜಿನಲ್ಲಿ ಕೊಂಡುಕೊಂಡ ಮರದ ಕ್ರಯದ ಪೈಕೀ ಕೇಕಡಾ ಹತ್ತರ ಮೇರೆ ಕೇವಣಾತಿ ಮೊಬಲಗು ಹರಾಜು ಕಾಲದಲ್ಲಿ ಕೊಡಬೇಕು. ಬಾಕಿ ಮೊಬಲಗನ್ನ 60 ದಿನಗಳಲ್ಲಿ ಕೊಡಬೇಕು. ಇಡಕ್ಕೆ ತಪ್ಪಿದರೆ ಕೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ಹಿಡಿಯಲ್ಪಡುವದು.

ಬಿ. ಮಗ್ಯಾತ್.
ಡೆಪ್ಯುಟಿ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಸ್ವಂತ ಪ್ರಕಟನೆ.

ಚಿಂತಾಮಣಿ ತಾಲ್ಲೂಕು ಕೋಟಿಕಲ್ ಶ್ರೀಲಕ್ಷ್ಮೀನರಸಿಂಹ್ಮಸ್ವಾಮಿ ಭಕ್ತ ಸಹಾಯ ಧರ್ಮ್ಮಸಮಾಜನಿ ಕಂಪನಿ ನಿಧಿಲಿಮಿಟೆಡ್ ಆಫಿಸ್‌ನಿಂದ.

ಕಂಪನಿ ಮಜಕೂರ್ ವಿಶಿಪ್ಟ್‌ಷೇರ್‌ಹೋಲ್ಡರ್‌ಗಳಿಗೂ ಕೃತಪಡಿಸುವದೇನಂದರೆ, ಬ್ಯಾಲೆನ್ಸ್ ಷೀಟ್ ಅಂಗೀಕಾರ ಮಾಡತಕ್ಕ ಅಂಕ. ಕಂಪನಿಯು ವೈಂಡಪ್ ಮಾಡಬೇಕೆಂದು ಕೆಲವು ಬ್ರಾಂಚ್‌ಗಳ ಅನೇಕ ಮೆಂಬರ್‌ಗಳು ರಿಸೋರ್ಟ್ಯೂಗಳು ಕೊಟ್ಟರುವದರಿಂದ ಕಂಪನಿಯು ವೈಂಡಪ್ ಮಾಡಬೇಕಾದ ಅಂಕ, ಮತ್ತು ಅದಕ್ಕೆ ತಕ್ಕ ವಿವರ್ಟುಗಳು ಆಗತಕ್ಕ ವಿಷಯ ತಕರಾರು ಕೇಸುಗಳ ವಿಮರ್ಸೆಮಾಡ ತಕ್ಕ ಅಂಕ—ಈ ಅಂಕಗಳ ವ್ಯವಸ್ಥೆಬ್ಯಗ್ಯೆ ಸ್ಯ ಮಜಕೂರು ನವಂಬರ್ 30ನೇ ತಾರೀಖು ಶನಿವಾರ ಹಗಲು 10 ಘಂಟೆ ಲಾಗಾಯತ್ತು ಸಾಯಂಕಾಲ 5 ಘಂಟೆವರಿವಿಗೂ ಕಂಪನಿ ಹೌಸಿನಲ್ಲಿ ಜನರಲ್ ವಿಾಟಿಂಗ್ ಸಭೇಕೂರಬೇಕೆಂದು ನಿರ್ಣಯಿಸಲ್ಪಟ್ಟರುವದರಿಂದ ಆ ತಾರೀಖಿಗೆ ಕಂಪನಿ ಮಜಕೂರಿಗೆ ದಯಮಾಡಿಸಬೇಕೆಂದು ಕೋರುವ ತಮ್ಮಗಳ ವಿಧೇಯ, ಕೆ. ಲಿಂಗಣ್ಣಶಾಸ್ತ್ರೀ—ಪ್ರಸಿಡೆಂಟ್.

ಮುಳಬಾಗಲ ಶ್ರೀ ಆಂಜನೆಯಸ್ವಾಮಿ ಕಂಪನೀ ಲಿಮಿಟೆಡ್ ಆಫಿಸಿನಿಂದ.

ಕಂಪನಿ ಮಜಕೂರ್ ವಿಶಿಪ್ಟ್ ಷೇರ್ ಹೋಲ್ಡರ್‌ಗಳಿಗೂ ತಿಳಿಯಪಡಿಸುವದೇನಂದರೆ,—ಈ ಕಂಪನಿಯು ವೈಂಡಪ್ ಮಾಡಬೇಕೆಂದು ನವಂಬರ್ 11ನೇ ತಾರೀಖು ಸೋಮವಾರ ನಡಿಸಿದ ಜನರಲ್ ವಿಾಟಿಂಗಿನ ಪ್ರೊಸಿಡಿಂಗ್ಸನ್ನ ಕಾಯಂ ಮಾಡತಕ್ಕ ಬಗ್ಯೆ ಯಿದೇ ತಿಂಗಳು 25ನೇ ತಾರೀಖು ಸೋಮವಾರ 2 ಘಂಟೆಗೆ ಕಂಪನಿಗೆ ದಯಮಾಡಿಸಬೇಕೆಂದು ಕೋರುವ ತಮ್ಮ ವಿಧೇಯ,

ಪ್ರಸಿಡೆಂಟ್ ಕಂಚಯ್ಯ.